# ಬ್ರಾಡ್ ಪಿಟ್ ಡಬಲ್ ಗೇಮ್?



ಹಾಲಿವುಡ್‌ನ ಸುಂದರಾಂಗ ತಾರೆ ಬ್ರಾಡ್ ಪಿಟ್ ಇತ್ತೀಚೆಗೆ ನಟನೆಯ ಹೊರತಾದ ಇತರ ಕಾರಣಗಳಿಗಾಗಿ ಸುದ್ದಿಯಾಗುತ್ತಿದ್ದಾನೆ. ಕೊರೊನಾ ಭಯದಿಂದಾಗಿ ಹಾಲಿವುಡ್‌ನಲ್ಲಿ ಶೂಟಿಂಗ್ ಸ್ಥಗಿತಗೊಂಡು ನಾಲ್ಕು ತಿಂಗಳುಗಳೇ ಆಗಿವೆ. ಹೊಸ ಸಿನಿಮಾಗಳು ಇಲ್ಲದಿದ್ದರೂ ಬ್ರಾಡ್ ಪಿಟ್ ಸುದ್ದಿಗೆ ಕೊರತೆಯೇನಿಲ್ಲ. ಪತ್ನಿ ಏಂಜೆಲಿನಾ ಜೋಲಿ ಜೊತೆಗೆ ಆತನ ಸಂಬಂಧ ಹದಗೆಟ್ಟು ಆಕೆಯ ಮನೆ ಬಿಟ್ಟು ವರ್ಷವೇ ಕಳೆದಿದೆ. ಆ ಬಳಿಕ ಮೊದಲ ಹೆಂಡತಿ ಜೆನಿಫರ್ ಅನಿಸ್ಟನ್ ಜೊತೆಗೆ ಹೆಚ್ಚು ಸಮಯ ಕಳೆಯತೊಡಗಿದ ಸುದ್ದಿ ಬಂತು. ಮಾಧ್ಯಮಗಳಲ್ಲಿ ಇತ್ತೀಚೆಗೆ ಇವರಿಬ್ಬರ ಫೋಟೊ ಮತ್ತು ವೀಡಿಯೊಗಳದ್ದೇ ದಿಬ್ಬಣ.

ಆದರೆ ಈಗ ಬ್ರಾಡ್‌ಪಿಟ್ ಮತ್ತೆ ಉಲ್ಟಾ ಹೊಡೆದಿರುವ ಸುದ್ದಿ ಬಂದಿದೆ. ಏಂಜೆಲಿನಾ ಜೋಲಿಯ ಮನೆಗೆ ರಾತ್ರಿಯ ಹೊತ್ತು ಕದ್ದುಮುಚ್ಚಿ ಹೋಗಿ ಬೆಳಿಗಿನ ಜಾವ ಅಲ್ಲಿಂದ ಎದ್ದು ಬರುತ್ತಿದ್ದಾನಂತೆ ಬ್ರಾಡ್‌ಪಿಟ್. ಜುಲೈ 28ರಂದು ಹೀಗೆ ರಾತ್ರಿ ಹೋಗಿ ಬೆಳಿಗ್ಗೆ ಬಂದದ್ದರ ಫೋಟೊ ಕೂಡಾ ಬಹಿರಂಗಗೊಂಡಿದೆ. ತನ್ನ ಆರು ಮಕ್ಕಳ ಜೊತೆಗೆ ಲಾಸ್ ಏಂಜಲೀಸ್‌ನಲ್ಲಿರುವ ಮನೆಯಲ್ಲಿ ಜೋಲಿ ಏಕಾಂಗಿ ವಾಸ ಶುರು ಮಾಡಿ ವರ್ಷ ಕಳೆದಿದೆ. ಸಂಬಂಧ ಹದಗೆಟ್ಟು ಬ್ರಾಡ್ ಪಿಟ್ ಬೇರೆಯಾದ ಬಳಿಕ ಕೆಲವು ತಿಂಗಳ ಕಾಲ ಇಬ್ಬರೂ ಮಾತನಾಡುವುದನ್ನೂ ಬಿಟ್ಟಿದ್ದರು. ಆದರೆ ಅದು ಹೇಗೋ ಗೊತ್ತಿಲ್ಲ, ಇಬ್ಬರ ಮಧ್ಯೆ ಮತ್ತೆ ರಾಜಿಯಾಗಿದೆ. ಒಬ್ಬರನ್ನು ಇನ್ನೊಬ್ಬರು ಬಿಟ್ಟಿರುವುದು ಕಷ್ಟ ಎಂಬ ತೀರ್ಮಾನಕ್ಕೆ ಇಬ್ಬರೂ ಬಂದಂತಿದೆ.

ಈಗ ಜೆನಿಫರ್ ಪ್ರತಿಕ್ರಿಯೆ ಏನು ಎನ್ನುವುದರ ಬಗ್ಗೆ ಎಲ್ಲರ ಕುತೂಹಲ. 20 ವರ್ಷಗಳ ಹಿಂದೆ ಪಿಟ್ ಮತ್ತು ಜೆನಿಫರ್ ಮದುವೆಯಾದದ್ದು ದೊಡ್ಡ ಸುದ್ದಿ. ಐದು ವರ್ಷಗಳ ಸಂಸಾರ ಚೆನ್ನಾಗಿಯೇ ನಡೆಯಿತು. ಜಗತ್ತಿನಲ್ಲೇ ಅತ್ಯಧಿಕ ಫೋಟೊಗಳು ಪ್ರಕಟವಾದ ಜೋಡಿಯಿದು ಎಂದು ಆಗ ಸುದ್ದಿಯಾಗಿತ್ತು. 15 ವರ್ಷಗಳ ಹಿಂದೆ 2005ರಲ್ಲಿ ಇದೇ ಏಂಜೆಲಿನಾ ಜೋಲಿ ಸಲುವಾಗಿ ಪತ್ನಿ ಜೆನಿಫರ್‌ಳನ್ನು ಬಿಟ್ಟು ಹೋದವನು ಬ್ರಾಡ್ ಪಿಟ್. ಜೆನಿಫರ್ ಮತ್ತು ಪಿಟ್ ನಡುವೆ ಆ ಬಳಿಕದ ವರ್ಷಗಳಲ್ಲಿ ದೊಡ್ಡ ವಾಗ್ಯುದ್ಧವೇ ನಡೆಯಿತು. ಜೆನಿಫರ್ ಹಟ ಹಿಡಿದು ಡೈವೋರ್ಸ್ ಮತ್ತು ಪರಿಹಾರ ಪಡೆದುಕೊಂಡಳು.

ಜೋಲಿಯ ಜೊತೆಗಿನ ಸಂಸಾರದಲ್ಲಿ ದಶಕ ಉರುಳಿ ಮೂರು ಸ್ವಂತ ಮತ್ತು ಮೂರು ದತ್ತು ಮಕ್ಕಳನ್ನು ಪಡೆದ ಪಿಟ್ ಮದುವೆ ಮುರಿದುಕೊಂಡದ್ದಕ್ಕೆ ಕಾರಣವೇನು ಎನ್ನುವುದು ಇನ್ನೂ ಗೊತ್ತಾಗಿಲ್ಲ. ಜೋಲಿಯ ಮನೆ ಬಿಟ್ಟ ನಂತರ ಪಿಟ್ ನೇರವಾಗಿ ಮೊದಲ ಹೆಂಡತಿಯ ತೆಕ್ಕೆಗೆ ಬಿದ್ದದ್ದು ನೋಡಿ ಎಲ್ಲರೂ ಹಳೆಯ ಮದುವೆ ಮತ್ತೆ ಊರ್ಜಿತಗೊಳ್ಳಬಹುದು ಎಂದು ಅಂದುಕೊಂಡಿದ್ದರು. ಆದರೆ ಈಗ ಮತ್ತೆ ಬ್ರಾಡ್ ಪಿಟ್‌ಗೆ ಜೋಲಿಯ ಸಂಗವೇ ಹೆಚ್ಚು ಹಿತ ಅನ್ನಿಸಿದಂತಿದೆ.

ಬ್ರಾಡ್ ಪಿಟ್ ಕಳೆದ 30 ವರ್ಷಗಳಿಂದ ಹಾಲಿವುಡ್‌ನಲ್ಲಿ ಸುದ್ದಿ ಮಾಡುತ್ತಲೇ ಇದ್ದಾನೆ. 56ರ ಹರೆಯದ ಈತ ಈಗಲೂ ಸೂಪರ್‌ಹಿಟ್ ಚಿತ್ರಗಳನ್ನು ಕೊಡುತ್ತಿರುವುದು ಅಭಿಮಾನಿಗಳ ಸಂಖ್ಯೆಯನ್ನು ಒಂದೇ ಸಮನೆ ಏರಿಸಿದೆ. 'ವರ್ಲ್ಡ್ ವಾರ್ ಝಡ್' ಮತ್ತು 'ಮಿಸ್ಟರ್ ಅಂಡ್ ಮಿಸೆಸ್ ಸ್ಮಿತ್' ಚಿತ್ರಗಳು ಕೋಟ್ಯಂತರ ಡಾಲರ್ ಹಣ ದೋಚುವುದಕ್ಕೆ ಮುನ್ನವೂ ಈತ ಹಾಲಿವುಡ್‌ನ ಲವರ್ ಬಾಯ್ ಆಗಿ ಪ್ರಸಿದ್ಧನಾಗಿದ್ದ. ಕಾಲೇಜಿನಲ್ಲಿ ಡುಮ್ಮಿ ಹೊಡೆದು ಅಭಿನಯ ಕ್ಷೇತ್ರಕ್ಕೆ ಬಂದಾತ, ಆರಂಭದಲ್ಲಿ ಟೀವಿಯಲ್ಲಿ ಅದೃಷ್ಟ ಪರೀಕ್ಷೆ ಮಾಡಿದ. 'ಗ್ರೋವಿಂಗ್ ಪೈನ್ಸ್' ಸಹಿತ ಹಲವು ಟೀವಿ ಸೀರಿಯಲ್‌ಗಳು ಹಿಟ್ ಆದ ಬಳಿಕ ಬಾಲಿವುಡ್ ಕೈಹಿಡಿದು ಸೆಳೆದುಕೊಂಡಿತು.

ಜಗತ್ತಿನ ಅತ್ಯಂತ ಶ್ರೀಮಂತ ನಟರಲ್ಲಿ ಒಬ್ಬ ಎನ್ನುವ ಖ್ಯಾತಿಯೂ ಪಿಟ್‌ಗೆ ಇದೆ. 2020ರ ಆರಂಭದಲ್ಲಿ ಅಂದಾಜು ಮಾಡಿದ ಪ್ರಕಾರ ಈತನ ನಿವ್ವಳ ಆಸ್ತಿ ಮೊತ್ತ 300 ದಶಲಕ್ಷ ಡಾಲರ್. 1991ರಲ್ಲಿ 'ಥೆಲ್ಮಾ ಅಂಡ್ ಲೂಯಿಸ್' ಸಿನಿಮಾಕ್ಕೆ ಆರಂಭದಲ್ಲಿ ಈತ ಪಡೆದುಕೊಂಡ ಸಂಭಾವನೆ ದಿನಕ್ಕೆ 6000 ಡಾಲರ್ ಅಷ್ಟೆ. ಆದರೆ ಇವತ್ತು ಬ್ರಾಡ್ ಪಿಟ್ ಸನಿಹಕ್ಕೆ ಬರಲು ಮಧ್ಯಮ ವರ್ಗದ ನಿರ್ಮಾಣ ಸಂಸ್ಥೆಗಳೂ ಹೆದರುತ್ತವೆ. ಅಷ್ಟು ಎತ್ತರಕ್ಕೆ ಈತನ ಸಂಭಾವನೆ ಏರಿದೆ. 'ಒನ್ಸ್ ಅಪಾನ್ ಎ ಟೈಮ್ ಇನ್ ಬಾಲಿವುಡ್' ಚಿತ್ರದ ನಟನೆಗೆ ಸಿಕ್ಕಿದ ಆಸ್ಕರ್ ಪ್ರಶಸ್ತಿಯೂ ಈತನ ಕೀರ್ತಿಯನ್ನು ಹೆಚ್ಚಿಸಿತು. ಆ ಚಿತ್ರಕ್ಕೆ ಈತ ಪಡೆದ ಸಂಭಾವನೆ ಒಂದು ಕೋಟಿ ಡಾಲರ್. 2015ರಲ್ಲಿ ಈತ ನಿರ್ಮಿಸಿ, ನಟಿಸಿದ 'ದಿ ಬಿಗ್ ಶಾರ್ಟ್' ಸಿನಿಮಾ ಆಸ್ಕರ್ ಪ್ರಶಸ್ತಿ ಗೆದ್ದುಕೊಂಡಿತು. ಆ ಚಿತ್ರ ಬಾಕ್ಸಾಫೀಸ್‌ನಲ್ಲಿ 133 ದಶಲಕ್ಷ ಡಾಲರ್ ಗಳಿಸಿದ್ದು ದೊಡ್ಡ ಸುದ್ದಿ. ನಟನೆಯಲ್ಲಿ ದುಡಿದ ದುಡ್ಡನ್ನು ಚಿತ್ರಗಳ ನಿರ್ಮಾಣಕ್ಕೆ ಸುರಿದ ಬಳಿಕ ಬ್ರಾಡ್ ಪಿಟ್ ಬಾಲಿವುಡ್‌ನ ಅತಿದೊಡ್ಡ ಶ್ರೀಮಂತನಾದ. ಈಗ ರಿಯಲ್ ಎಸ್ಟೇಟ್‌ನಲ್ಲೂ ದೊಡ್ಡ ಹೂಡಿಕೆಯಿದೆ. ಗುಲಾಬಿ ಹೂವುಗಳ ಕೃಷಿಯುಳ್ಳ ಫ್ರೆಂಚ್ ವೈನ್ ಯಾರ್ಡ್ ಕೂಡಾ ಈತನ ಜೇಬು ತುಂಬಿಸಿದೆ.

ಇಷ್ಟೆಲ್ಲ ಇದ್ದೂ ಈತ ಗರ್ಲ್‌ಫ್ರೆಂಡ್‌ಗಳನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಎಡವುತ್ತಾನೆ ಎನ್ನುವ ಸುದ್ದಿ ಇದೆ. ಏಂಜೆಲಿನಾ ಜೂಲಿಯ ಸಖ್ಯ ತೊರೆಯುವುದಕ್ಕೆ ಮುನ್ನವೇ ಈತ ಇನ್ನೊಬ್ಬ ನಟಿ ಚಾರ್ಲೆಸ್ ಥೆರಾನ್ ಜೊತೆಗೆ ಓಡಾಡುವ ಸುದ್ದಿ ಬಂದಿತ್ತು. ಈ ಮಧ್ಯೆ ಅಲಿಯಾ ಶೌಕತ್ ಎನ್ನುವ ನಟಿಯ ಜೊತೆಗೂ ಸಂಬಂಧದ ಸುದ್ದಿ ಹರಡಿತ್ತು. ಅದೇ ಹೊತ್ತಲ್ಲಿ ಜೆನಿಫರ್ ಅಲಿಸ್ಟರ್ ತನ್ನ 50ನೇ ಹುಟ್ಟುಹಬ್ಬಕ್ಕೆ ಹಳೆಯ ಗಂಡನನ್ನು ಕರೆಸಿಕೊಂಡು ಮೆರೆದದ್ದು ಎಲ್ಲರ ಕಣ್ಣು ಕುಕ್ಕಿತು. ಈಗ ಮತ್ತೆ ಜೋಲಿ ಮನೆಗೆ ರಾತ್ರಿ ವೇಳೆ ಬ್ರಾಡ್ ಪಿಟ್ ಹೋಗಿ ಬರುವುದು ನೋಡಿದರೆ ವಿಚ್ಛೇದಿತ ಗಂಡ–ಹೆಂಡತಿ ಮತ್ತೆ ಸಂಸಾರ ಹೂಡುವ ಸಾಧ್ಯತೆಯೂ ದಟ್ಟವಾಗಿದೆ.

***

ಅದನ್ನೆಲ್ಲ ಮರೆತು ಮತ್ತೆ ತನ್ನ ಬಳಿಗೆ ಬಂದ ಗಂಡನನ್ನು ಜೆನಿಫರ್ ಸ್ವಾಗತಿಸಿದ್ದಳು.

ಈಗ ಜೋಲಿ ಜೊತೆಗೆ ಮತ್ತೆ ತನ್ನ ಗಂಡ ಸಖ್ಯ ಸಾಧಿಸಿರುವುದನ್ನು ಯಾವ ಕಾರಣಕ್ಕೂ ಜೆನಿಫರ್ ಒಪ್ಪುವ ಸಾಧ್ಯತೆ ಇಲ್ಲ ಎನ್ನುವುದು ಆಕೆಯ ನಿಕಟವರ್ತಿಗಳ ಹೇಳಿಕೆ.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65